ಅಧ್ಯಕ್ಷರು :- ಗೌಡರೇ, ಬೇಗನೆ ಮಾಡಿಸಿ ಎಂದು ಹೇಳಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕನ್ನು ಬೂದು ಪ್ರದೇಶವೆಂದು ಗುರುತಿಸಿರುವುದು

138(1942) - ಶ್ರೀ ಪ್ರಭಾಕರ ಬಂಗೇರಕೆ (ಬೆಳ್ತಂಗಡಿ) : ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಈ ಹಿಂದೆ ಬೂದು ಪ್ರದೇಶ ಎಂದು ಗುರುತಿಸಲ್ಪಟ್ಟಿರುವ ವಿಚಾರವು ಸರ್ಕಾರದ ಗಮನದಲ್ಲಿಯೇ :

ಆ) ಸರಕಾರದ ಗಮನದಲ್ಲಿದ್ದಲ್ಲಿ, ಅಂತರ್ಜಲ ಮಟ್ಟ ಏರಿಕೆಗಾಗಿ ತಾಲ್ಲೂಕಿನಲ್ಲಿ ಎಷ್ಟು ಕಿಂಡಿ ಅಣೆಕಟ್ಟುಗಳಿಗೆ ಮಂಜೂರಾತಿ ನೀಡಲಾಗಿದೆ ; (ವಿವರಗಳನ್ನು ನೀಡುವುದು).

ಇ) ಇಲಾಖೆಯ ವತಿಯಿಂದ 2001-02 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ ; (ತಾಲ್ಲೂಕುವಾರು ಮಾಹಿತಿಗಳನ್ನು ನೀಡುವುದು)?

ಶ್ರೀ ಎಸ್. ಕುಮಾರ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು)

ಅ) ಹೌದು.

ಆ) ಅಂತರ್ಜಲ ಮಟ್ಟ ಏರಿಕೆಗಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ 6 ಕಿಂಡಿ ಅಣೆಕಟ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು, ನಿರ್ವಹಣೆಯಲ್ಲಿದೆ. ಈ ಯೋಜನೆಗಳಿಂದ 306.04 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. 2000-01 ನೇ ಸಾಲಿನಲ್ಲಿ ಇಳಂತಿಲ ಎಂಬಲ್ಲಿ ಕಿಂಡಿ ಅಣೆಕಟ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ. ಈ ಯೋಜನೆಯಿಂದ 40 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಇ) 2001-02 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಹೊಸ ಕಾಮಗಾರಿಗಳು ಸೇರಿದ್ದು, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ-2

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪ್ರಭಾಕರ ಬಂಗೇರ ಕೆ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1942

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2001-02ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲ್ಪಟ್ಟ ಮುಂದುವರೆದ ಹಾಗೂ

ಹೊಸ ಕಿಂಡಿ ಅಣೆಕಟ್ಟು ಕಾಮಗಾರಿಗಳ ವಿವರಗಳು

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ತಾಲ್ಲೂಕು	ಅಂದಾಜು ಮೊತ್ತ	2001-02 ರ ಅನುದಾನ	12:2001 ರವರೆಗೆ ಆದ ವೆಚ್ಚ	ಷರಾ
1)	ಇಳಂತಿಲ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿ	ಬೆಳ್ತಂಗಡಿ	20.00	2.00	13.20	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
2)	ಇರಾ ಗ್ರಾಮದ ಸುವರ್ಣಬೈಲು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ	ಬಂಟ್ವಾಳ	10.00	3.00	0.08	ಕಾಮಗಾರಿ ಪ್ರಾರಂಭಿಸಬೇಕಾಗಿದೆ.
3)	ಕಟೀಲು ದೇವಸ್ಥಾನದ ಬಳಿ ನಂದಿನಿ ನದಿಗೆ ಕಿಂಡಿ ಅಣೆಕಟ್ಟು ನಿರ್ಮಾಣ (ನಬಾರ್ಡ್)	ಮಂಗಳೂರು	26.00	7.80	0.26	ಕಾಮಗಾರಿ ಪ್ರಾರಂಭಿಸಬೇಕಾಗಿದೆ.
4)	ಸರ್ವೆ ಗ್ರಾಮದ ಸೊರಕೆ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ	ಪುತ್ತೂರು	20.00	1.00	19.57	ಕಾಮಗಾರಿ ಪೂರ್ಣಗೊಂಡಿದೆ.
5)	ಕೆಮ್ಮಾರ ಹಳ್ಳಿ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ (ಕೆಳಪ್ರವಾಹ)	ಪುತ್ತೂರು	16.25	1.00	1.00	ಕಾಮಗಾರಿ ಪ್ರಗತಿಯಲ್ಲಿದೆ

1	2	3	4	5	6	7
6)	ಬಜತ್ತೂರು ಗ್ರಾಮದ ಕಿಮ್ಮಾರ ಎಂಬಲ್ಲಿ ಮೇಲ ಪ್ರವಾಹ ಕಿಂಡಿ ಅಣೆಕಟ್ಟು ನಿರ್ಮಾಣ (ನಬಾರ್ಡ್)	ಪುತ್ತೂರು	9.60	3.00	6.22	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
7)	ಕುಕ್ಕೆ ಸುಬ್ರಹ್ಮಣ್ಯ ಗ್ರಾಮದ ದೇವಸ್ಥಾನದ ಬಳಿ ಕುಮಾರಧಾರ ನದಿಗೆ ಕಿಂಡಿ ಅಣೆಕಟ್ಟು ನಿರ್ಮಾಣ	ಸುಳ್ಯ	10.00	0.25	12.83	ಕಾಮಗಾರಿ ಪೂರ್ಣಗೊಂಡಿದೆ.
	ಹೊಸ ಕಾಮಗಾರಿಗಳು					
1)	ತೆಂಕ ಕಾರಂದೂರು ಗ್ರಾಮದ ಪಾಲ್ಗುಣ ಹೊಳೆಗೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿ (ನಬಾರ್ಡ್)	ಬೆಳ್ತಂಗಡಿ	37.00	12.00	-	ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಒಪ್ಪಿಗೆ ಪಡೆದಿದ್ದು ಸರ್ಕಾರಕ್ಕೆ ದಿ:21-01-2002 ರ ಈ ಕಛೇರಿ ಪತ್ರದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ಸಲ್ಲಿಸಲಾಗಿದೆ.
2)	ಕಡಿರುದ್ಯಾವರ ಗ್ರಾಮದ ಒಳಂಬ್ರ ಎಲ್ಲಿ ಬಂಡಾಜ ಹೊಳೆಗೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿ	ಬೆಳ್ತಂಗಡಿ	35.00	7.50	-	ಅಂದಾಜು ಪೆಟ್ಟಿಗೆ ಅನುಮೋದನೆ ನೀಡಿದ್ದು ಟೆಂಡರ್ ಕರೆಯಲಾಗಿದೆ.

ಅನುಬಂಧ - 1

ಕ್ರಮ ಸಂಖ್ಯೆ	ಕಿಂಡಿ ಅಣೆಕಟ್ಟಿನ ಹೆಸರು	ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ)
1)	ಮಳವಂತಿಗೆ ಗ್ರಾಮದ ಅತಿಯಂತರ ಕಟ್ಟೆ	52.80
2)	ಇಂದಬೆಟ್ಟು ಗ್ರಾಮದ ಇಂದಬಿಟ್ಟು	42.80
3)	ಅಡಿಂಜೆ ಗ್ರಾಮದ ಮೂಡುಕೋಡಿ	52.80
4)	ಮಿತ್ತಬಾಗಿಲು ಗ್ರಾಮದ ಅನದ್ಕಹಳ್ಳ ಮತ್ತು ನಂದಿಕಾಡು ಹಳ್ಳಕ್ಕೆ	52.60
5)	ಕರಿರುದ್ಯಾವರ ಗ್ರಾಮದಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ	42.03
6)	ಮುಂತಾದ ಗ್ರಾಮದಲ್ಲಿ ಮುಂಡಾಜಿ ಹೊಳೆಗೆ ಅಡ್ಡಲಾಗಿ	63.01
	ಒಟ್ಟು	306.04

ಶ್ರೀ ಪ್ರಭಾಕರ ಬಂಗೇರ :- ಮಾನ್ಯ ಅಧ್ಯಕ್ಷರೇ, ಉತ್ತರ ಕೊಟ್ಟಿದ್ದಾರೆ. ಕಳೆದ ವರ್ಷ ಕೂಡ ಒಂದೆರಡು ಕಿಂಡಿ ಅಣೆಕಟ್ಟುಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದರೆ 1-1-2002ರಲ್ಲಿ ಆಡಳಿತಾತ್ಮಕ ಮಂಜೂರಾತಿಗಾಗಿ ಏನು ಸರ್ಕಾರಕ್ಕೆ ಬಂದಿದೆ, ಅದು ಇನ್ನೂ ಕೂಡ ಕ್ಲಿಯರೆನ್ಸ್ ಆಗಿಲ್ಲ. ಎಂಬ ವದಂತಿ ಇದೆ. ಅದು ಯಾವಾಗ ಆಗುತ್ತದೆ? ಇನ್ನು ಅಂತರ್‌ಜಲ ಮಟ್ಟ ಏರಬೇಕೆಂಬ ವಿಚಾರ ನಮ್ಮೆಲ್ಲರ ಗಮನಕ್ಕೆ ಬಂದಿದೆ. ಇದು ಬಹಳ ಕೆಳಮಟ್ಟಕ್ಕೆ ಹೋಗಿದೆ. ಅದೇ ರೀತಿಯಲ್ಲಿ ಕಿಂಡಿ ಅಣೆಕಟ್ಟುಗಳು ಜಾಸ್ತಿಯಾದಾಗ ಇದು ಹೆಚ್ಚಾಗುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಈ ದೃಷ್ಟಿಯಲ್ಲಿ ನನ್ನ ಕ್ಷೇತ್ರದಲ್ಲಿ ಕೂಡ ನೀರಿನ ಮಟ್ಟ ಕೆಳಕ್ಕೆ ಹೋಗಿರುವುದರಿಂದ ಈ ವರ್ಷದಲ್ಲಿ ಆರನ್ನು ಮಾತ್ರ ಬರುವ ವರ್ಷಕ್ಕೆಂದು ಕೊಟ್ಟಿದ್ದೀರಿ. ಬರುವ ವರ್ಷ ಎಂದರೆ ಯಾವಾಗ ಎಂದು ಕೊಟ್ಟಿಲ್ಲ. ಇದಕ್ಕೆ ಇನ್ನೂ ಹೆಚ್ಚಿಗೆ ಗಮನ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ:- ಈಗಾಗಲೇ ನಮ್ಮ ಕರಾವಳಿ ಪ್ರದೇಶಗಳಾದ ಮಂಗಳೂರು, ಉಡುಪಿ ಮತ್ತು ಕಾರವಾರ ಜಿಲ್ಲೆಗಳಿಗೆ ನಾವು ಕಿಂಡಿ ಅಣೆಕಟ್ಟುಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದು ಅದರ ರೂಪುರೇಷೆಗಳನ್ನು ಮಾಡುತ್ತಿದ್ದೇವೆ. ಹಣಕಾಸಿನ ಲಭ್ಯತೆ ಇಲ್ಲದೇ ಇರುವ ಕಾರಣಕ್ಕಾಗಿ ಈ ವರ್ಷ ಅಷ್ಟು ಸೀಮಿತವಾಗಿ ನಾವು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹಣಕಾಸಿನ ಲಭ್ಯತೆ ಮೇಲೆ ಎಷ್ಟು ಸಾಧ್ಯತೆ ಇದೆಯೋ ಅಷ್ಟು ಕಾಮಗಾರಿಗಳನ್ನು ಹಮ್ಮಿಕೊಳ್ಳುತ್ತೇವೆ.

ಶ್ರೀ ಕೆ.ಪ್ರಭಾಕರ ಬಂಗೇರ :- ಮುಂಡಾಜಿ ಅಣೆಕಟ್ಟಿಗೆ 37 ಲಕ್ಷ ರೂಪಾಯಿ ಅಂದಾಜು ವೆಚ್ಚ ತಾಂತ್ರಿಕ ಅನುಮೋದನೆಗಾಗಿ ಸರ್ಕಾರಕ್ಕೆ ಬಂದಿದೆ. ಅದು ಆಗಿದೆಯೇ ಇಲ್ಲವೇ ಎಂಬುದು ಗೊತ್ತಾಗಲಿಲ್ಲ. ಇದು 21.2.2002ರಂದು ತಾಂತ್ರಿಕ ಅನುಮೋದನೆಗಾಗಿ ಸರ್ಕಾರಕ್ಕೆ ಬಂದಿದ್ದು, ಇದು ಏನಾಗಿದೆಯೆಂದು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್. ಕುಮಾರ್ ಬಂಗಾರಪ್ಪ :- ಸನ್ಮಾನ್ಯ ಶಾಸಕರು ಹೇಳಿದಂಥ ವಿಷಯವನ್ನು ತಕ್ಷಣಕ್ಕೆ ನಾವು ಗಮನಕ್ಕೆ ತೆಗೆದುಕೊಂಡು ಮಂಜೂರಾತಿಯನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಎನ್. ಯೋಗಿಶ್‌ಭಟ್ :- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಕುಡಿಯುವ ನೀರು ಮತ್ತು ನೀರಾವರಿಗೆ ಅನುಕೂಲವಾಗುವಂಥ ಪಶ್ಚಿಮ ವಾಹಿನಿ ಯೋಜನೆಯನ್ನು ಯಾವಾಗ ಅನುಷ್ಠಾನಕ್ಕೆ ತರುತ್ತೀರಿ?

ಶ್ರೀ ಎಸ್.ಕುಮಾರ ಬಂಗಾರಪ್ಪ :- ಮಾನ್ಯ ಅಧ್ಯಕ್ಷರೇ, ಈಗಾಗಲೇ, ಮಾನ್ಯ ಶಾಸಕರಿಗೆ ಹೇಳಿದ ಹಾಗೆ ಸುಮಾರು 556 ಕೋಟಿ ರೂಪಾಯಿಗಳಲ್ಲಿ ಸಂಪೂರ್ಣವಾಗಿ ಇರತಕ್ಕಂಥ ಕರಾವಳಿಗೆ ಸಣ್ಣ ಅಣೆಕಟ್ಟುಗಳನ್ನು ನಿರ್ಮಾಣ ಮಾಡತಕ್ಕಂಥ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಆದರೆ ಹಣಕಾಸಿನ ಲಭ್ಯತೆ ಇಲ್ಲದೇ ಇರುವ ಕಾರಣಕ್ಕಾಗಿ ಈ ವರ್ಷ ಅದನ್ನು ನಾವು ಮಾಡಲಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮುಂದೆ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಮಾಡುತ್ತೇವೆ.

ಅಂಗನವಾಡಿ ಕಾರ್ಯಕರ್ತರ ಗೌರವಧನ ಹೆಚ್ಚಿಸುವುದು

139(1661) - ಶ್ರೀ ಪುಟ್ಟರಂಗನಾಥ್ ಹೆಚ್.ಎಸ್. (ಬೇಲೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ಬೇಲೂರು ತಾಲ್ಲೂಕಿನಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಇರುತ್ತವೆ.

2. ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು?

3. ಅಂಗನವಾಡಿ ಕಾರ್ಯಕರ್ತರಿಗೆ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

1. ಬೇಲೂರು ತಾಲ್ಲೂಕಿನಲ್ಲಿ ಒಟ್ಟು 162 ಅಂಗನವಾಡಿ ಕೇಂದ್ರಗಳು ಇವೆ.

2. ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ನಂತರ ಕೇಂದ್ರಗಳನ್ನು ಪ್ರಾರಂಭ ಮಾಡಲಾಗುವುದು.

3. ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಶ್ರೀ ಹೆಚ್.ಎಸ್. ಪುಟ್ಟರಂಗನಾಥ್ :- ಮಾನ್ಯ ಅಧ್ಯಕ್ಷರೇ, ಈ ಅಂಗನವಾಡಿ ಕಾರ್ಯಕರ್ತರ ಗೌರವಧನವನ್ನು ಹೆಚ್ಚಿಸಬೇಕು ಎನ್ನುತಕ್ಕಂಥ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಮತ್ತು ಅವರಿಗೆ ಆಗುತ್ತಾ ಇರತಕ್ಕಂಥ ಕಿರುಕುಳವನ್ನು ತಪ್ಪಿಸುವುದಕ್ಕೆ ಏನೇನು ಕಾರ್ಯಕ್ರಮ ಕೈಗೊಂಡಿದ್ದೀರಿ ಎಂಬುದನ್ನು ಹೇಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.